Regd. No. M. 3500.
KODAGU" MERCARA, (Coorg).

ಕೊಡಗು

[illegible] ವಾರ್ಷಿಕ ಚಂದಾ [illegible]
ಸಂಪುಟ [illegible] | ತಾರೀಕು ೨೧ [illegible] ಶುಕ್ರವಾರ. | ಸಂಚಿಕೆ [illegible]

ಅನಾಸಕ್ತಿಯನ್ನು ಬಿಟ್ಟು ಕಾರ್ಯಪ್ರವೃತ್ತರಾಗಿರಿ

ವಿಧಾಯಕ ಕಾರ್ಯಕ್ರಮ ಕೈಕೊಂಡು ಹೃಷ್ಟಪುಷ್ಟ ಕಾಂಗ್ರೆಸನ್ನು ರೂಪಿಸಿರಿ.

ಸದ್ಯದ ಸ್ಥಿತಿ

ಕೊಡಗಿನಲ್ಲಿ, ಹಿಂದೂದೇಶದ ಇತರ ಸಂಸ್ಥಾನಗಳಲ್ಲಿ ನಡೆದಂತೆಯೇ 1942 ರಲ್ಲಿಯೂ ಕ್ರಾಂತಿಯ ಆಂದೋಲನವು ನಡೆಯಿತು. ಹಲವಾರು ಜನರ ದಸ್ತಗಿರಿಯಾಗಿ [illegible] ಕಾನೂನುಗಳು ಕತ್ತರಿಸಿಬಿದ್ದಂತಾಗಿವೆ. [illegible] ದ್ದರಿಂದಲೇ [illegible] ಗಳಲ್ಲಿ ಕಾಂಗ್ರೆ[illegible] ವಿಧಾಯಕ ಕಾರ್ಯಕ್ರಮಗಳ [illegible] ಕೈಕೊಂಡಿದ್ದಾರೆ. [illegible] ಗಿನ ಚರ್ಚೆಯಲ್ಲಿ ಭಾಗವಹಿಸಿ[illegible] ಇದೆಲ್ಲ ಆಗು[illegible] ಹೇಳುವದಾದರೆ ಈ [illegible] ಯಾವ ಪುರುಷಾರ್ಥ ಸಾಧಿಸ[illegible] ತು? ಈ ಕಾಂಗ್ರೆಸಿಗರು [illegible] ಈ ಸಭೆಗಳಲ್ಲಿ ಭಾಗವಹಿಸಿ[illegible] ಯಾಕೆ? ಇತರ ಪ್ರಾಂತಗಳಲ್ಲಿ [illegible] ಗಳು ಕಾಂಗ್ರೆಸಿನ ವಿಧಾಯಕ, ಕಾ[illegible] ವಾದ ಕೆಲಸವನ್ನು [illegible] ತ್ತಿವೆ. ಕೊ[illegible] , ತನ್ನ ಆರ್ಥಿಕಾಭಿವೃದ್ಧಿ ಮಾಡಿಕೊಳ್ಳಬೇಕಾದರೆ ವಿಧಾಯಕ ಕಾರ್ಯಕ್ರಮ[illegible] ಗಳ [illegible] ಶದ [illegible] ಮಾಡಿ[illegible] ಯಲ್ಲಿ [illegible] ದೇಶ[illegible]

ಇಂಥಾ ಪರಿಸ್ಥಿತಿಯಲ್ಲಿ ಕಾಂಗ್ರೆಸಿಗರು ತಮ್ಮ ಹಿಂದಿನ ನೀತಿಯನ್ನೇ ಇಟ್ಟುಕೊಂಡಿರುವದಾದರೆ ಆದರಿಂದ ನಾಡಿನ ಪ್ರಗತಿಯಾಗದು. ಕೇವಲ [illegible] ಜಿಲ್ಲಾ ಬೋರ್ಡುಗಳ [illegible] ಹಾಕುವ [illegible] ತನ್ನ [illegible] ಸಾಧನೆ [illegible] ದಿಗೆ ದೇಶದ ಸೇವೆ [illegible] ರ ಕಾಲವು [illegible] ನಿಂತು [illegible] ಗ್ರೆಸಿಗರಿಗೆ [illegible] ವಾಗಿ ರೂಪುಗೊಳ್ಳುತ್ತಿದೆ. [illegible] ರತ್ನ[illegible] ದಿಗ್ಗಜ್ಜಿಗಳಲ್ಲಿ [illegible] ತತ್ವವನ್ನು [illegible] ಸಿಗರ [illegible] ದೇಶಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗಮಾಡಿ [illegible] ಹಿತಕ್ಕಾಗಿಯೋ ದುಡಿದ ಮಹನೀಯರಿ[illegible]

[illegible] ನ್ನು [illegible] ಸೇವೆ [illegible] ಸುವದಿಲ್ಲ. [illegible] ಕಾಂಗ್ರೆಸಿ[illegible] ಬೇಕು [illegible]

ಕಾಂಗ್ರೆಸಿನ ಶುದ್ಧೀಕರಣದ ಮತ್ತು ಕಾರ್ಯವಿಕೇಂದ್ರೀಕರಣದ ಅವಶ್ಯಕತೆಯಿದೆ ಕಾರಣದಿಂದಲೇ ಅಖಿಲ ಭಾರತ ಕಾಂಗ್ರೆಸಿನ ನೇತೃತ್ವದಲ್ಲಿ [illegible] ವೇತನರಹಿತರಾದ ಕಾರ್ಯಕರ್ತರ ದೊಡ್ಡ [illegible] ತ್ತಿದೆ. ಇದರ ಸದಸ್ಯರ ಸಂಖ್ಯೆ ಒಂದು ಲಕ್ಷವೆಂದೂ, ಇವರೆಲ್ಲರೂ ಹಿಂದೂದೇಶದ ಏಳುಲಕ್ಷ ಹಳ್ಳಿಗಳ [illegible] ಆರ್ಥಿಕ ಅಭಿವೃದ್ಧಿಗಾಗಿ [illegible] ದೂ ನಿಶ್ಚಯಿಸಲಾಗಿದೆ. ಇವರ [illegible] ವರ್ಷಗಳ [illegible] ದಲ್ಲಿ ನಡೆಯುವದು. ಇಂಥಾ [illegible] ದು ಯೋಜನೆಯು ಏರ್ಪಟ್ಟದ್ದು ಭಾರತೀಯರ ಭಾಗ್ಯೋದಯ; ಕೊಡಗು ನಾಡಿನವರ ಪೂರ್ವಪುಣ್ಯ. [illegible] ಅನುವನ್ನು ಕೊಡಗಿನ ಯುವಕರು ಪಡೆದುಕೊಂಡು ಹಳ್ಳಿಗರ ಉದ್ಧಾರಕ್ಕೆ ಕಾರಣರಾಗುವದಲ್ಲದೆ ತಮ್ಮ ಆತ್ಮೋದ್ಧಾರವನ್ನು ಅದರೊಂದಿಗೆ ದೇಶೋದ್ಧಾರವನ್ನು ಮಾಡಬೇಕಾದ್ದುದು ಕರ್ತವ್ಯವಿದೆ. ಏಳು ಲಕ್ಷ ಗ್ರಾಮಗಳಿರುವ ಹಿಂದೂದೇಶದಲ್ಲಿ ಒಂದು ಲಕ್ಷ ಕೆಲಸಗಾರರನ್ನು ತರಬೇತುಮಾಡುವ ಏರ್ಪಾಡು ಆಗಿರುವದರಿಂದ ಇದರಂತೆ ಕೊಡಗಿನ 298 ಗ್ರಾಮಗಳಿಗಾಗಿ ಕಡಿಮೆ 40 ಜನರಾದರೂ ತರಬೇತಾಗಿ ಬರಬೇಕಿದೆ. ಇಷ್ಟು ಜನರನ್ನು ಆರಿಸಿ ತರಬೇತಿಗೆ ಕಳುಹಿಸುವದು ಕಾರ್ಯಕರ್ತರ ಆದ್ಯಕರ್ತವ್ಯ. [illegible] ವ್ಯಕ್ತಿಗಳು ತರಬೇತಿಗಾಗಿ ಯೋಗ್ಯ ಯೋಜನೆಮಾಡಿ ಜನರನ್ನು ಆರಿಸುತ್ತಿರುವಾಗ ಕೊಡಗು ಹಿಂದುಳಿಯುವದು ಸಾಧ್ಯವಿಲ್ಲ. [illegible]

ಮಾದರಿ ಗ್ರಾಮ.

[illegible] ತರಬೇತಿಗೆ ಕಳುಹಿಸಲ್ಪಡಲಿರುವ [illegible] ವರೆಗೆ ಬರುವ ವರೆಗೆ ಅಂದರೆ ನಾಲ್ಕು ವರ್ಷಗಳ ವರೆಗೆ ದೇಶದಲ್ಲಿ [illegible] ಕಾಂಗ್ರೆಸಿನ ಕಾರ್ಯಕರ್ತರು [illegible] ವಾಗಿ ಕಾಂಗ್ರೆಸಿಗರಲ್ಲಿ [illegible] ಕೊಡಗಿನಲ್ಲಿ [illegible] ನೂಲುವದು, ನೇಯುವದು, ಸಾಬೂನು ತಯಾರಿಸುವದು ಮೊದಲಾದ ಕೈಗಾರಿಕೆಗಳನ್ನು ಕೈಕೊಳ್ಳಲು ಬೇಕಾದಷ್ಟು ಕಚ್ಚಾ ಸಾಮಾನುಗಳು [illegible] ಕೆಲಸವಿಲ್ಲದಿರುವ ಗ್ರಾಮದ ಜನರನ್ನು ಈ ಕೆಲಸಗಳಿಗೆ ಹಚ್ಚಿ ಸ್ವಾವಲಂಬನೆಯ ಮಾರ್ಗ ತೋರಿಸಿಕೊಡುವದು ಕರ್ತವ್ಯ. ಈ ಕೆಲಸವನ್ನು ಒಂದೇ [illegible] ಭಾರತ [illegible] ನೈತಿಕ [illegible] ಸೇವಾ [illegible]

[illegible] ಈ ಕೆಲಸವನ್ನು [illegible] ಕೆಲಸಗಾರರ [illegible] ಭಾರತ [illegible] ನಿಕ ಕೆಲಸಕ್ಕೆ ಧನ ಸಂಗ್ರಹಿಸುವದೆಂದರೆ (ಅದರಲ್ಲೂ ಕಾಂಗ್ರೆಸಿಗರಿಗೆ) [illegible] ಈ ಮೊದಲು [illegible] ಧನದ [illegible] ಗ್ರಹಿಸ [illegible] ಕೊಂಡ [illegible] ಪವಿತ್ರ [illegible] ಬಂದರೆ ಕೊಡಗು ನಾಡಿನವರು [illegible] ಕೆಲಸಕ್ಕೆ [illegible] ಕೊಡಗಿನ [illegible] ಕು. ಪಂಡಿತ ಜವಾಹರರು ಹೇಳಿದಂತೆ 'Successe comes to those who dare and act; it seldom goes to the timid' ಎಂಬ [illegible] ಕರಿಗೆ [illegible]

(4ನೆಯ ಪುಟ ನೋಡಿ.)

ಕೊಡಗು

ತಾ. ೨೯-೧೨-೧೯೪೪ನೇ ಶುಕ್ರವಾರ

ಲಂಚಕೋರತನ.

ಜೀವನಾವಶ್ಯಕ ವಸ್ತುಗಳ ಬೆಲೆಯನ್ನ ನಿಯಂತ್ರಿಸಿದಂದಿನಿಂದ ಲಂಚಕೋರತನಕ್ಕೆ ಪ್ರಾಶಸ್ತ್ಯ ಹೆಚ್ಚತೊಡಗಿದೆ. ಲಾಭದ ದೃಷ್ಟಿಯಿಂದ ಕೆಲವರು ಸುಲಿಗೆಗಾರರಾಗಿದ್ದರೆ ದುಡ್ಡಿನ ದೃಷ್ಟಿಯಿಂದ ಅಧಿಕಾರವಿರುವ ಕೆಲವರು ಲಂಚಕೋರರಾಗಿದಾರೆ. ಈಗಿನ ಪತ್ರಿಕೆಗಳಲ್ಲಿ ಈ ಲಂಚಕೋರತನದ ವರದಿಗಳು ಪ್ರತಿ ದಿನ ಇದ್ದೇ ಇರುತ್ತವೆ. 'ಅಲ್ಲೊಬ್ಬ ಐ. ಸಿ. ಎಸ್. ಅಧಿಕಾರಿಗೆ ಲಂಚಗೂಳಿತನಕ್ಕಾಗಿ 5 ವರ್ಷ ಶಿಕ್ಷೆ ಕೊಡಲಾಯಿತು. ಇಲ್ಲೊಬ್ಬ ತಹಶೀಲ್ದಾರನನ್ನು ಕೆಲಸದಿಂದ ತೆಗೆಯಲಾಯಿತು. ಮತ್ತೊಬ್ಬ ಪೊಲೀಸ್ ಸಬ್ ಇನ್ಸ್‌ಪೆಕ್ಟರರ ಮೇಲೆ ಕೇಸು ಹೂಡಲಾಗಿದೆ' ಈ ರೀತಿ ವಾರ್ತೆಗಳು ಮೇಲಿಂದ ಮೇಲೆ ಬರುತ್ತವೆ. 'ಈ ಲಂಚಕೋರತನವು ಕೆಲವೊಂದು ಪ್ರಾಂತ, ಸಂಸ್ಥಾನಗಳಲ್ಲಿ ಮಾತ್ರವಲ್ಲ; ಕೇಂದ್ರ ಸರಕಾರದ ವರೆಗೂ ಇದರ ಪ್ರಭಾವವಿದೆ'ಯೆಂದು ಬ್ಯಾರಿಸ್ಟರು ಜಿನ್ನಾರವರು ಹೇಳಿದ್ದಾರೆ. ಈ ಸರ್ವವ್ಯಾಪಿ ಲಂಚಕೋರತನವನ್ನು ನಿಲ್ಲಿಸುವ ಬಗ್ಗೆ ಪ್ರಯತ್ನ, ಅದಕ್ಕೆ ಸಂಬಂಧಿಸಿದ ಕಾನೂನುಗಳಿದ್ದರೂ, ಅದರ ಪ್ರಭಾವ ಕಡಿಮೆಯಾಗಿರುವದಿಲ್ಲ. ಈಗಿನ ಸೀಮೆಣ್ಣೆ, ಪೆಟ್ರೋಲ್, ಸಕ್ಕರೆ, ಕಾಗದ ಮತ್ತಿತರ ಸಾಮಾನುಗಳ ನಿಯಂತ್ರಣವನ್ನು ಲಂಚಕೋರತನಕ್ಕೆ ಪ್ರತ್ಯಕ್ಷವಲ್ಲದಿದ್ದರೂ, ಪರೋಕ್ಷವಾಗಿ ಉಪಯೋಗಿಸಿಕೊಳ್ಳುವ ಸಾಧ್ಯತೆಯಿದೆ. ವ್ಯಾಪಾರಿಗಳು ತಮ್ಮ ವ್ಯಾಪಾರದ ದೃಷ್ಟಿಯಿಂದ ಅಧಿಕಾರಿಗಳ ಕೈ ಬೆಚ್ಚಗೆಮಾಡುವರು. ಆದರೆ ಅದರ ಭಾರವು ಬಡಜನರ ಮೇಲೆ ಬೀಳುವದಲ್ಲದೆ ವ್ಯಾಪಾರಿಗೆ ಕಾಸಿನ ನಷ್ಟವಾಗದು. ವ್ಯಾಪಾರಿಯು ಲಂಚಕೊಟ್ಟ ಮೊಬಲಗನ್ನೂ ಸಾಮಾನಿನ ಕ್ರಯದಲ್ಲಿ ಹೇಗಾದರೂ ಭರ್ತಿಮಾಡಲು ಯತ್ನಿಸದಿರನು.

ಭರತಖಂಡದ ಪ್ರತಿ ಭಾಗದಲ್ಲಿ ಈ ಮಹಾರೋಗವು ಹರಡಿದ್ದರೆ ಕೊಡಗು ಮಾತ್ರ ಇದರಿಂದ ನಿರ್ಲಿಪ್ತವಾಗಿದೆಯೆಂದು ಯಾರೂ ತಿಳಿದುಕೊಳ್ಳಬಾರದು. ಸಹಜ, ಲಂಚಕೋರತನದ ಹೆಸರು ಈ ಪ್ರಾಂತದಲ್ಲಿ ಇಲ್ಲದ ಕಾಲ ಒಂದಿತ್ತು. ಆದರೆ ಕಾಲ ಬದಲಾಯಿಸಿದೆ. ಮನುಷ್ಯನ ಮನಸ್ಸೂ ಲಂಚಕ್ಕಾಗಿ ಹಾತೊರೆಯುತ್ತಿದೆ. ಯಾವುದೇ ಪ್ರಾಂತದಲ್ಲಾಗಲೀ ಲಂಚಕೋರತನವನ್ನು ನಿಲ್ಲಿಸಲು ಸರಕಾರವು ಜಾಗರೂಕವಾಗಿರಬೇಕು. ಸಾರ್ವಜನಿಕರೂ ಇದಕ್ಕೆ ಸಹಕರಿಸಬೇಕು. ಸರಕಾರದ ಆಧಾರಸ್ತಂಭಗಳಾದ ಅಧಿಕಾರಿಗಳೇ ಈ ಲಾಲಸೆಗೆ ಬಲಿಬಿದ್ದರೆ ಈ ಉಪದ್ರವ ನಿವಾರಣೆಗೆ ಬೇರೆ ಯಾರಿಂದಲೂ ಏನೂ ಮಾಡಲು ಸಾಧ್ಯವಿಲ್ಲ. ಕೊಡಗಿನಲ್ಲಿ ಹಿಡಿಯಲ್ಪಟ್ಟ ಯಾವ ಕೇಸೂ ಬಹಿರಂಗವಾಗಿ ಜನರ ದೃಷ್ಟಿಯನ್ನೆಳೆಯದಿದ್ದರೂ ಲಂಚಗೂಳಿತನ ಇದೆಯೆಂಬುದನ್ನು ಸರಕಾರವು ಸಹ ಅಲ್ಲಗಳೆಯಲಾರದು. ಆದ್ದರಿಂದ ಸರಕಾರವೂ, ಸಾರ್ವಜನಿಕರೂ ಹೃದಯಸಾಕ್ಷಿಯಿಟ್ಟು ಈ ಉಪದ್ರವವನ್ನು ನಿವಾರಿಸಲು ಯತ್ನಿಸಬೇಕಾದುದು ಕರ್ತವ್ಯ.

ಒಳದೇಶ.

12ನೇ ಕೊಡಗು ಸಹಕಾರ ಪರಿಷತ್ತು ಪಚ್ಚೆಯಪ್ಪ ಕಾಲೇಜಿನ ಪ್ರಿನ್ಸಿಪಲರಾದ ರಾ. ಸಾ. ಬಿ. ವಿ. ನಾರಾಯಣಸ್ವಾಮಿ ನಾಯುಡುರವರ ಅಧ್ಯಕ್ಷತೆಯಲ್ಲಿ ತಾ. 24-12-44 ರಲ್ಲಿ ನಡೆಯಿತು.

ಮಡಿಕೇರಿ ಹುಡುಗಿಯರ ಹೈಸ್ಕೂಲಿನಲ್ಲಿ ಆರನೇ ಫಾರಂನಲ್ಲಿದ್ದ 31 ವಿದ್ಯಾರ್ಥಿನಿಯರ ಪೈಕಿ 19 ಜನರನ್ನು ಪರೀಕ್ಷೆಗೆ ಕೂರಲು ಆರಿಸಿರುವರು.

ತಾ. 22-12-44 ರಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ಸಾಯಂಕಾಲ 7 ಗಂಟೆಗೆ ಅಲ್ಲಿಯ ಹಿಂದೀ ಪ್ರಚಾರಮಂಡಳಿಯ ಸಹಾಯಾರ್ಥವಾಗಿ 'ಕುರ್ಗ್‌ಸ್ಟಾರ್' ಚೆಕ್ಕೆರ ಅಪ್ಪಯ್ಯನವರ ಸಂಗೀತ ಖಚೇರಿಯು ನಡೆಯಿತು.

ತಾ. 25-12-44 ರಲ್ಲಿ ಮುಸ್ಲಿಂ ಲೀಗಿನ ಪ್ರೆಸಿಡೆಂಟರಾದ ಬ್ಯಾ. ಜಿನ್ನಾರವರ ಜನ್ಮದಿನೋತ್ಸವವನ್ನು ವೀರಾಜಪೇಟೆಯ ಶ್ರೀ ಮಾಣಿಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಅಖಿಲ ಕರ್ನಾಟಕ ಚರಖಾ ಸಂಘದ ಕಾರ್ಯದರ್ಶಿಗಳಾದ ಶ್ರೀ. ಕೆ. ವೆಂಕಟರಾಮಯ್ಯನವರು ತಾ. 29 ರಲ್ಲಿ ಮಡಿಕೇರಿಗೆ ಬಂದು ತಾರೀಕು 30 ರಲ್ಲಿ ಮೈಸೂರಿನ ಮಾರ್ಗವಾಗಿ ಹಿಂತೆರಳುವರು.

ಕೊಡಗು ಸಹಕಾರ ಸೆಂಟ್ರಲ್ ಬ್ಯಾಂಕಿನ ವಾರ್ಷಿಕ ಮಹಾಸಭೆಯು ತಾ. 23-12-44 ರಲ್ಲಿ ಶ್ರೀ. ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೊಂಗೆಟ್ಟಿರ ಅಪ್ಪಯ್ಯ, ಕೊಳ್ಳಿಮಾಡ ಕರುಂಬಯ್ಯ, ಕೋಳೆರ ಕರುಂಬಯ್ಯ, ಪಂದ್ಯಂಡ ಬೆಳ್ಯಪ್ಪ, ಕಂಜಿತಂಡ ಕುಶಾಲಪ್ಪನವರು, ಬಿಡುಮೆಂಬರುಗಳ ಪರವಾಗಿಯೂ, ಶ್ರೀಗಳಾದ ಕಾಕಮಾಡ ಗಣಪತಿ, ಪಿ. ಜಿ. ಮುದ್ದಮ್ಮಯ್ಯ, ಎಚ್. ಎಂ. ಪುಪ್ಪಣ್ಣ, ಬೆಟ್ಟೊಳಂಡ ಮಾಚಯ್ಯ, ಪಳಂಗಂಡ ಕರುಂಬಯ್ಯ, ಎಸ್. ಎನ್. ರಾಮಶೆಟ್ಟಿ, ಐನಂಡ ಕಾರ್ಯಪ್ಪ, ಕೆ. ಕೆ. ತಿಮ್ಮಯ್ಯ, ಪಟ್ಟಮಾಡ ಪೊನ್ನಪ್ಪ, ಮಂಡೇಪಂಡ ಸೋಮಯ್ಯ ಇವರುಗಳನ್ನು ಸಂಘಗಳ ಪರ ಡೈರೆಕ್ಟರುಗಳಾಗಿ ಆರಿಸಲಾಯಿತು.

ವಾರ್ತೆಗಳು.

ಯುದ್ಧದಲ್ಲಿ ಪೆಟ್ಟುಬಿದ್ದು ಮುಖ ವಿಕಾರಗಳನ್ನು ಹೊಂದುವವರ ಬಗ್ಗೆ 'ರಿಪೇರಿ'ಗೆ ಕೃತಕ ಮೂಗು, ಕಿವಿ, ಬೆರಳು ಮೊದಲಾದುವು, ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರಿಸ್‌ರವರ ಲೆಬರೇಟರಿಯಲ್ಲಿ ತಯಾರಾಗುತ್ತಿವೆ. ಸೈನಿಕರು ಪ್ರಾಣಗಳನ್ನು ಮಾತ್ರ ಬಿಡಬಾರದಾಗಿ ಇಚ್ಛಿಸಲಾಗಿದೆ.

ಬಂಗಾಳ ಬರಗಾಲಕ್ಕೆ ಸಿಕ್ಕಿ ನರಳುವ ಚಿಕ್ಕ ಮಕ್ಕಳನ್ನು ದತ್ತು ತೆಗೆದುಕೊಂಡು ಸಾಕಲು ಇಂಗ್ಲೆಂಡ್ ಅಮೇರಿಕದ ಅನೇಕ ಮಹನೀಯರು ಇಚ್ಛೆ ಪಟ್ಟಿದ್ದರೆಂದೂ ಆದರೆ ಆ ಮಕ್ಕಳು ತುಂಬಾ ಅನಾರೋಗ್ಯಕ್ಕೆ ಬಲಿಯಾಗಿದ್ದುದರಿಂದ ಕಳುಹಿಸಲು ಸಾಧ್ಯವಾಗಲಿಲ್ಲವೆಂದೂ ವಿಜಯಲಕ್ಷ್ಮಿ ಪಂಡಿತರು ನ್ಯೂಯಾರ್ಕಿನ ಪತ್ರಿಕೆಯೊಂದರಲ್ಲಿ ತಿಳಿಸಿರುವರು.

ಕಾಂಗ್ರೆಸ್ ಮುಖಂಡನ್ನು ಸದ್ಯದಲ್ಲೇ ಬಿಡುವ ಸಂಭವವಿರಬಹುದೆಂದು ಇಂಡಿಯಾ ಸರಕಾರದ ಶಿಕ್ಷಣ, ಆರೋಗ್ಯ ಖಾತೆಗಳ ಸಚಿವ ಸರ್ ಜೋಗೇಂದ್ರ ಸಿಂಗರು ತಿಳಿಸಿರುವರು.

ಪಂಡಿತ ಜವಾಹರಲಾಲ್‌ನೆಹ್ರೂರವರು ತಮ್ಮ ಆತ್ಮಚರಿತೆಯ ಎರಡನೇ ಭಾಗವನ್ನು 40-41ರಲ್ಲಿ ಡೇರಡನ್ ಜೈಲಿನಲ್ಲಿದ್ದಾಗಲೇ ಮುಗಿಸಿದರು. ಆ ಜೈಲಿನಿಂದ ಅವರು ಬಿಡುಗಡೆಯಾದ ಮೇಲೆ ಅವರ ಈ ಪುಸ್ತಕವನ್ನು ಟೈಪುಮಾಡಿಸಿ ಅದನ್ನು ಪ್ರಕಟಿಸುವ ಸಲುವಾಗಿ ತಮ್ಮ ಕೆಲವು ಮಿತ್ರರಿಗೆ 1942ನೇ ಅಗಷ್ಟಿಗೆ ಮುಂದೆಯೇ ಜವಾಹಿರಲಾಲರು ಕೊಟ್ಟಿದ್ದರು. ಈ ಪುಸ್ತಕವು ಬೇಗನೇ ಅಮೇರಿಕದಲ್ಲಿ ಪ್ರಕಟವಾಗುವುದೆಂದು ಜವಾಬ್ದಾರಿಯುತವಾದ ಕಡೆಗಳಲ್ಲಿ ಹೇಳಲಾಗುತ್ತಿದೆ.

ಭರತಪುರಿ ಸಂಸ್ಥಾನದಲ್ಲಿ ವಯಸ್ಸಾದಂತಹ ವಿಧುರರು (ಪತ್ನಿಯನ್ನು ಕಳೆದುಕೊಂಡತವರು) ಚಿಕ್ಕವಯಸ್ಸಿನ ಬಾಲಕಿಯರನ್ನು ಮದುವೆಯಾಗುವದು ಕೂಡದೆಂದು ಪ್ರತಿಬಂಧಿಸಿರುವುದಾಗಿ ಗೊತ್ತಾಗಿದೆ. ೫೦ ವರ್ಷ ವಯಸ್ಸನ್ನು ಮೀರಿದಂತಹ ವಿಧುರರು ೨೫ ವರ್ಷಕ್ಕೆ ಕಡಮೆಯಾಗಿರುವ ತರುಣಿಯರನ್ನು ಮದುವೆಯಾಗಕೂಡದೆಂದು ಭರತಪುರ ಸಂಸ್ಥಾನದ ಸರಕಾರವು ಆಜ್ಞೆಯಿತ್ತಿರುವುದಾಗಿ ತಿಳಿಸಿದೆ. ಈ ಆಜ್ಞೆಯಲ್ಲಿಯೇ ವರದಕ್ಷಿಣೆಯನ್ನು ತಡೆಗಟ್ಟಿ ಅಜ್ಞೆಯೊಯಲಾಗಿದೆ. ಈ ಆಜ್ಞೆಯನ್ನು ಉಲ್ಲಂಘಿಸುವವರಿಗೆ ಎರಡು ವರ್ಷಗಳ ಕಠಿಣ ಶಿಕ್ಷೆ ಅಥವಾ ೧೦೦೦ ರೂ ವರೆಗೆ ಜುಲುಮಾನೆ ಅಥವಾ ಎರಡು ಶಿಕ್ಷೆಯನ್ನು ವಿಧಿಸಲಾಗುವುದೆಂದು ತಿಳಿಸಲಾಗಿದೆ.

ಮುಂದಿನ ಬೇಸಿಗೆಯವರೆಗೂ ಜರ್ಮನಿಯ ಮಿಲಿಟರಿ ಶಕ್ತಿಯನ್ನು ನಾಶಮಾಡುವುದಕ್ಕಾಗುವುದಿಲ್ಲವೆಂದು ರಷ್ಯದ ಅಭಿಪ್ರಾಯ. ಯುದ್ಧವು ಬೇಗನೇ ಮುಗಿದು ಹೋಗುವುದೆಂಬ ಅತಿ ಆಶಾಭಾವನೆಯು ರಷ್ಯಾದ ಮುಖಂಡರುಗಳಲ್ಲಿಲ್ಲವೆಂಬುದಾಗಿ ಸ್ಪಷ್ಟವಾಗಿ ತಿಳಿಸಲಾಗಿದೆ. ಮಾಸ್ಕೋವಿಗೆ ಹೋಗಿದ್ದ ಅಮೆರಿಕಾ ಯುನೈಟೆಡ್ ಪ್ರೆಸ್ಸಿನ ಮುಖ್ಯಸ್ಥರಾದ ಮಿ. ಹೆನ್ರಿ ಕಾಸಿಡಿಯವರು ಈಚೆಗೆ ನ್ಯೂಯಾರ್ಕಿಗೆ ವಾಪಸು ಬಂದಾಗ ಈ ಸಮಾಚಾರವನ್ನು ತಿಳಿಸಿದರು.

ಕಲಕತ್ತಾ ನಗರದಲ್ಲಿ ಯಾರೂ ಹಾಳು ಹರಟೆ ಹೊಡೆಯದಂತೆ ಅಧಿಕಾರಿಗಳು ದಕ್ಷತೆ ವಹಿಸುತ್ತಿರುವರು. ರಾತ್ರಿ ಖಾನಾವಳಿ ಚಹದ ಅಂಗಡಿ ಮದ್ಯದ ಅಂಗಡಿಗಳಲ್ಲಿ ಅಡ್ಡಾಡಿ ಯಾರ್ಯಾರು ಏನೇನು ಹರಟೆ ಕೊಚ್ಚುತ್ತಿರುವರೆಂಬದನ್ನು ಅಧಿಕಾರಿಗಳು ಪರಿಶೀಲಿಸುತ್ತಿರುವರು. 200 ವರದಿಗಳನ್ನು ಪರಿಶೀಲಿಸಲಾಗಿ ಎಲ್ಲಿಯೂ ಜನರು ನಿರರ್ಥಕವಾಗಿ ಮಾತು ಆಡಿಲ್ಲೆಂಬಂತೆ ವರದಿಯಾಗಿದೆ.

'ಹರದಾಸ' ಸ್ಮಾರಕ ನಿಧಿ.

ತಾ. 24 ರಲ್ಲಿ ವೀರರಾಜಪೇಟೆಯಲ್ಲಿ ನಡೆದ ಸಹಕಾರ ಸಮ್ಮೇಳನದ ಸಂದರ್ಭದಲ್ಲಿ ಮೇಲ್ಕಂಡ ನಿಧಿಗೆ ಹಣ ಸಂಗ್ರಹಿಸುವ ವಿಷಯ ಮತ್ತು ಕವಿಗಳ ಗುಣಗಾನವನ್ನು ವಿ. ಐ. ಯ. ಮುತ್ತಣ್ಣನವರು ಮಾತಾಡಿದರು. ಶ್ರೀ. ಪಿ. ಐ. ಬೆಳ್ಯಪ್ಪನವರು ಅನುಮೋದಿಸಿ ಮಾತಾಡಿದರು. ವೀರಾಜಪೇಟೆಗೆ ಒಂದು ಸಮಿತಿಯನ್ನು ಶ್ರೀ. ಆರ್. ಹೆಚ್. ಶಣೈ ಇವರನ್ನು ಅಧ್ಯಕ್ಷರಾಗಿ ಶ್ರೀ. ಕೆ. ಪಿ. ಕರುಂಬಯ್ಯನವರನ್ನು ಕಾರ್ಯದರ್ಶಿಗಳಾಗಿ ಆರಿಸಲಾಯಿತು. ರಾ. ಬ. ಕೆ. ಟಿ. ಉತ್ತಪ್ಪನವರ ನೇತೃತ್ವದಲ್ಲಿ ಪೊನ್ನಂಪೇಟೆಯಲ್ಲಿ ತಾ. 23 ರಲ್ಲಿ ನಡೆದ ಸಭೆಯಲ್ಲಿ ವಿ. ಐ. ಯಂ. ಮುತ್ತಣ್ಣನವರೂ, ಶ್ರೀ. ರಾಜಾರಾವ್ ಎಂ. ಎ., ಇವರೂ ಕವಿಗಳ ವಿಷಯವಾಗಿ ಮಾತಾಡಿದರು. ಈ ಸ್ಮಾರಕ ನಿಧಿ ಸಮಿತಿಗೆ ಶ್ರೀ ಪಾರ್ವಂಗಡ ನಂಜಪ್ಪ (ಅಧ್ಯಕ್ಷರು) ಶ್ರೀ. ಕೆ. ಟಿ. ಮುದ್ದಪ್ಪನವರನ್ನು ಕಾರ್ಯದರ್ಶಿಗಳಾಗಿ ನೇಮಿಸಲಾಯಿತು. ಇದೇ ರೀತಿ ಗೋಣಿಕೊಪ್ಪಲು, ಹುದಿಕೇರಿ ಮೊದಲಾದ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳನ್ನು ಸೇರಿಸಿ ಆಯಾಯ ಸ್ಥಳಗಳಿಗೆ ಪ್ರತ್ಯೇಕ ಸಮಿತಿಯನ್ನು ನಿರ್ಮಿಸಲಾಯಿತು. ಈ ಸ್ಮಾರಕ ನಿಧಿಗೆ ಕೊಡಗಿನ ಮಹನೀಯರು ಉದಾರಗುಣದಿಂದ ಪ್ರೋತ್ಸಾಹಿಸಬೇಕೆಂದು ಸಮಿತಿಯು ಕೇಳಿಕೊಳ್ಳುತ್ತದೆ. ವ್ಯಕ್ತಿಗಳಿಂದಲ್ಲದೆ ಈ ವರೆಗೆ ಸುಮಾರು ರೂ. 280 ಈ ನಿಧಿಗೆ ಸೇರಿದೆ. ಅದರ ಆಶ್ರಯದಲ್ಲಿ ಶ್ರೀಮತಿ ಕಿಟ್ಟಿಸುಬ್ಬಯ್ಯನವರ ನರ್ತನವು ತಾ. 27 ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು.

'ಕೊಡಗು ಭತ್ತ ವ್ಯಾಪಾರಸ್ಥರ
ಎಸೋಸಿಯೇಷನ್'
ವೀರಾಜಪೇಟೆ.

ನೋಟೀಸು!

ತಾ. 4-1-1945ನೇ ಗುರುವಾರ ದಿನ ನಮ್ಮ ಎಸೋಸಿಯೇಷನಿನ ಮಹಾಸಭೆಯು ಪೂರ್ವಾಹ್ನ 12 ಗಂಟೆಗೆ ಸರಿಯಾಗಿ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ಶ್ರೀ ಕೆ. ಪಿ. ಕರುಂಬಯ್ಯ, ಎಂ. ಎ., ಎಲ್ ಎಲ್. ಬಿ., ಎಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ನಡೆಯುವುದು. ಎಲ್ಲಾ ಮೆಂಬರುಗಳೂ, ಸಾರ್ವಜನಿಕ ಮಹನೀಯರೂ, ಬಂದು ಭಾಗಿಗಳಾಗಬೇಕಾಗಿ ವಿನಂತಿ.

ಕಾರ್ಯಕ್ರಮ-(1) ಕಳೆದ ಮಹಾಸಭೆಯ ವರದಿ, (2) ಆಡಿಟ್ ರಿಪೋರ್ಟ್, (3) ಡೈರೆಕ್ಟರುಗಳ ವರದಿ, (4) ಚುನಾವಣೆ ಇತ್ಯಾದಿ.

ಸಿ. ಪಿ. ಕುಶಾಲಪ್ಪ,
ಬಿ. ಪಿ. ಬೋಪಯ್ಯ,
2-2. ಸೆಕ್ರೆಟರಿ.

ಆಸ್ತಿ ಮಾರಾಟಕ್ಕಿದೆ.

ಮಡಿಕೇರಿ ಮುನ್ಸಿಪಾಲಿಟಿಯಲ್ಲಿರುವ 11 ಎಕ್ರೆ ಏರ್ಪಾದ ಈ ಕೆಳಗಿನ ಆಸ್ತಿ ಮಾರಾಟ ಮಾಡಲ್ಪಡುವುದು.

ಇಟ್ಟಿಗೆಯ ಕಟ್ಟಡದ ಒಂದು ಒಳ್ಳೇ ಬಂಗ್ಲೆ, ಇದಕ್ಕೆ ಸಂಬಂಧಿಸಿದ ಎರಡು ಹೊರಮನೆಗಳು, ಒಂದು ದನದ ಕೊಟ್ಟಿಗೆ ಅದರ ಹತ್ತಿರ ಮೋಟಾರ್ ಶೆಡ್, ಒಂದು ಆಳುಗಳ ಲೈನ್, ಒಟ್ಟು ಮುನ್ಸಿಪಲ್ ಕಂದಾಯ ರೂ. 12-0-0. ರೂ. 9-0-0 ಕಂದಾಯದ ಎರಡು ಗಾಡಿ ಬತ್ತ ಬೆಳೆಯುವ 75 ಬಟ್ಟಿ ಭೂಮಿ. ಸರಾಸರಿ 2 ಖಂಡಿ ಕಾಫಿ ಬರುವ ರೂ. 10-0-0 ಕಂದಾಯದ 3 ಎಕ್ರೆ ಅರೇಬಿಕಾ ಕಾಫಿ ತೋಟ. ಒಳ್ಳೇ ಸ್ಥಿತಿಯಲ್ಲಿರುವ ವರ್ಷಕ್ಕೆ 4 ಮಣ ಯಾಲಕ್ಕಿ ಬೆಳೆಯುವ 1 ಎಕ್ರೆ ಯಾಲಕ್ಕಿ ತೋಟ.

ಸದಾ ನೀರಿನ ಅನುಕೂಲತೆ ಇದೆ. ದನ ಕರ ಸಾಕಲು ತುಂಬಾ ಅನುಕೂಲ ಇದೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಡಾ. ಸಿ. ಬಿ. ಅಚ್ಚಯ್ಯ,
4-3. ಮಡಿಕೇರಿ, ಕೊಡಗು.

ಪ್ರಕಟಣೆ.

ವೀರಾಜಪೇಟೆ ಸಿನೆಮಾ ಮೈದಾನದಲ್ಲಿ ಜನವರಿ ತಿಂಗಳ ಅಂತ್ಯದಲ್ಲಿ 'ವಾಲಿಬಾಲ್' ಪಂದ್ಯಾಟವು ನ್ಯೂ ವಿಕ್ಟೋರಿಯಾ ವಾಲಿಬಾಲ್ ಕ್ಲಬ್ಬಿನ ಆಶ್ರಯದಲ್ಲಿ ನಡೆಯುವದು. ಪಂದ್ಯಾಟದಲ್ಲಿ ಭಾಗವಹಿಸಲಿಚ್ಛಿಸುವವರು ತಾ. 15-1-45 ರೊಳಗೆ ರೂ. 5/- ಗ್ರ್ಯಾಂಡ್ ಫೀಜಿನೊಡನೆ ಬರಕೊಳ್ಳಬೇಕು. ಜಯವನ್ನು ಹೊಂದಿದವರಿಗೆ ಮೂರು ವರ್ಷಗಳ ರೋಲಿಂಗ್ ಕಪ್ಪು ದೊರೆಯುವದಲ್ಲದೆ ಪ್ರತಿ ವ್ಯಕ್ತಿಗೆ ಒಂದೊಂದರಂತೆ 9 ಮೆಡಲುಗಳು ದೊರೆಯುವವು.

ಎನ್. ಸಿ. ಸುಬ್ಬಯ್ಯ
ಬಿ. ಎ. ಎಲ್. ಟಿ.
ಪ್ರೆಸಿಡೆಂಟ್.

ಪತ್ರ ಬರೆಯುವ ವಿಳಾಸ.
ಎ. ಪಿ. ಅಬ್ದುಲ್ ಖಾದರ್,
ಸೆಕ್ರೆಟರಿ.

ಪೂರ್ವ ಬಂಗಾಳದ ಮೇಲೆ ಬಾಂಬು.

ತಾ. 25-12-44ರ ರಾತ್ರಿ ಪೂರ್ವ ಬಂಗಾಳದ ಮೇಲೆ ಜಪಾನರು ಬಾಂಬು ಧಾಳಿ ಮಾಡಿದರು. ಶತ್ರುಗಳ ಎರಡು ವಿಮಾನಗಳನ್ನು ಉರುಳಿಸಿ ಮತ್ತೆರಡಕ್ಕೆ ನಷ್ಟ ಮಾಡಿ ಹಿಂದೆ ಓಡಿಸಲಾಯಿತೆಂದೂ ಬಾಂಬುಗಳಿಂದಾಗಿ ಸ್ವಲ್ಪ ನಷ್ಟವಾಯಿತ್ತೆಂದೂ ವರದಿಯೊಂದು ತಿಳಿಸುತ್ತದೆ.

ಜರ್ಮನರ ಭೀಕರ ಪ್ರತಿಧಾಳಿ.

ಪಶ್ಚಿಮ ರಂಗದಲ್ಲಿ ಭೀಭತ್ಸ ಕಾದಾಟ.

ಮಿತ್ರಶಿಬಿರದಲ್ಲಿ ಅನೈಕ್ಯತೆ.

— ಲೇ:—'ಗುಪ್ತ' —

ಡಿಸೆಂಬರ ತಾರೀಕು 16 ನೇ ಶನಿವಾರವು ಮಿತ್ರರಾಷ್ಟ್ರಗಳಿಗೆ ಒಂದು ಗಂಡಾಂತರದ ದಿನವಾಗಿ ಪರಿಣಮಿಸಿತು. ಆ ದಿನವೇ ಜರ್ಮನ್ ದಂಡುಗಳು ತಮ್ಮ ಆ ವರೆಗಿನ ಹಿಂದೋಟವನ್ನು ಬಿಟ್ಟು ರಭಸದಿಂದ ಮಿತ್ರರ ಮೇಲೆ ಪ್ರತಿಧಾಳಿಯನ್ನು ಕೈಕೊಂಡುದು. ಜರ್ಮನರು ತಾರೀಕು 16 ರ ನಸುಬೆಳಕಿನಲ್ಲಿ ಮಿಂಚಿನ ವೇಗದಿಂದ ಮಿತ್ರದಂಡುಗಳ ಮೇಲೆ ಬಿದ್ದರು. ಜರ್ಮನಿಯ ಸಮರತಜ್ಞನಾದ, ಶತ್ರುಭಯಂಕರನಾದ ಜನರಲ್ ರಂಡ್‌ಸ್ಟನು ಸೈನ್ಯನಡೆಸುತ್ತಿರುವನು. ಜರ್ಮನರು ಈ ಧಾಳಿಗೆ 15 ರಿಂದ 20 ರ ವರೆಗೆ ಸೈನ್ಯಡಿವಿಜನುಗಳನ್ನು ಉಪಯೋಗಿಸುತ್ತಿರುವರು. ಬೆಲ್ಜಿಯಮ್, ಲಕ್ಸೆಂಬರ್ಗ್ ಗಡಿಯ ಸುಮಾರು 80 ಮೈಲು ಪ್ರದೇಶದಲ್ಲಿ ಮುನ್ನಡೆಯುತ್ತಿರುವರು. ಬೆಲ್ಜಿಯಮಿನ ಒಳಗೆ ಸುಮಾರು 40 ಮೈಲುಗಳಷ್ಟು ನುಗ್ಗಿರುವರು. ಜರ್ಮನ್ ಸೇನೆಗಳ ಗುಂಡಿನ ಮಳೆಯು ಬೋರ್ಗರೆಯುತ್ತಿದೆ. ಈ ವರೆಗೆ ಕಾಣದೆ ಇನ್ನಂಥಾ ವಿಮಾನಪಡೆಗಳು ಬಹು ಸಂಖ್ಯೆಯಿಂದ ಆಕಾಶದಲ್ಲಿ ಝೇಂಕರಿಸುತ್ತಾ ಬಾಂಬು ಹಾಕುತ್ತಿವೆ. ಟ್ಯಾಂಕುಗಳ ಗರ್ಜನೆ, ಯೋಧರ ಕೋಲಾಹಲ, ಗುಪ್ತಾಸ್ತ್ರಗಳ ಪಟಾಟೋಪ ಇವುಗಳಿಂದ ರಣರಂಗವು ಭಯಾನಕವಾಗಿದೆ. ಜರ್ಮನರು ತಮ್ಮ 'ವಿ. 2' ಅಸ್ತ್ರಕ್ಕಿಂತಲೂ ವೇಗವಾಗಿ ಹೋಗುವ ಆದರೆ ಆದರಂತೆಯೇ ರೆಕ್ಕೆಯಿಲ್ಲದ ಗುಪ್ತಾಸ್ತ್ರ ಒಂದನ್ನು ಉಪಯೋಗಿಸುತ್ತಿರುವರಂತೆ. ಮಿತ್ರರೂ ಬಹು ವೀರಾವೇಶದಿಂದ ಹೋರಾಡುತ್ತಿರುವರು. ಇದರಿಂದ ಜರ್ಮನರ ಮಿಂಚಿನವೇಗಕ್ಕೆ ಸ್ವಲ್ಪ ತಡೆಬಿದ್ದಿದ್ದರೂ ಅವರ ರಣಆರ್ಭಟವನ್ನು, ಮುನ್ನಡೆಯನ್ನು ತಡೆದುನಿಲ್ಲಿಸುವದು ಇನ್ನೂ ಆಗಿಲ್ಲ. ಮಿತ್ರರಿಗೆ ಸೆರೆಸಿಕ್ಕಿದ ಕೆಲವು ಜರ್ಮನ್ ಸೈನಿಕರ ಹೇಳಿಕೆಯಂತೆ ಕ್ರಿಸ್‌ಮಸ್ ವೇಳೆಗೆ ಏಚೆನ್‌ನಗರವನ್ನೂ, ಜನವರಿ ಪ್ರಥಮ ವಾರದಲ್ಲಿ ಪ್ಯಾರಿಸ್ ನಗರವನ್ನೂ ಹಿಡಿದುಕೊಡುವದಾಗಿ ಹಿಟ್ಲರನು ಜರ್ಮನರಿಗೆ ಭರವಸೆಕೊಟ್ಟಿರುವನಂತೆ! ಜರ್ಮನರು ಮಿತ್ರರ ವಶವಾಗಿರುವ ಮಹಾನಗರಗಳನ್ನು ಪುನರಾಕ್ರಮಿಸಿ ಮಿತ್ರರನ್ನು ಯೂರೋಪಿನಿಂದ ಹೊರದೂಡುವ ಅಂದರೆ 1940 ನೇ ಇಸ್ವಿಯಲ್ಲಿದ್ದ ಪರಿಸ್ಥಿತಿಗೆ ತರಲು ಪ್ರಯತ್ನಿಸುತ್ತಿದ್ದಾರೆ.

ಇವನ್ನೆಲ್ಲಾ ನೋಡಿದರೆ ಈ ವರೆಗೆ ನಮಗೆ ಕೊಡಲ್ಪಟ್ಟ ವರದಿಗಳಂತೆ ಜರ್ಮನರು ಹತಾಶರಾಗಿಲ್ಲ, ನಿರ್ವೀರ್ಯರ, ನಿಸ್ತೇಜರಾಗಿ ಅವ್ಯವಸ್ಥೆಗೆ ಈಡಾಗಿಲ್ಲವೆಂಬುದು ಸ್ವಯಂವ್ಯಕ್ತವಾಗುತ್ತದೆ. ಜರ್ಮನರು ಮುಂದಾಲೋಚನೆಯಿಂದಲೇ ತಮ್ಮ ಗಡಿಯವರೆಗೂ ಹಿಂತೆಗೆದುಕೊಂಡಿರಬೇಕೆಂದು ಊಹಿಸಬಹುದು. ಹಿಟ್ಲರನು ಇಂತಿಂಥಾ ತಾರೀಕಿನಲ್ಲಿ ಇಂತಿಂಥಾ ನಗರವನ್ನು ಹಿಡಿದುಕೊಡುವೆನೆಂದು ಜರ್ಮನರಿಗೆ ಸಾರಬೇಕಾದರೆ ತನ್ನ ಸೈನ್ಯದ ಮೇಲೆ ಸ್ವಲ್ಪವಾದರೂ ಭರವಸೆಯಿಲ್ಲದೆ ಸಾಧ್ಯವಾಗುವ ಮಾತಲ್ಲ. ಮಿತ್ರರು ಕ್ರಿಸ್‌ಮಸ್ ಸಮಯದ ಹೊತ್ತಿಗೆ ಯೂರೋಪು ಯುದ್ಧವನ್ನು ಮುಗಿಸಿಬಿಡಬೇಕೆಂಬ ಹಂಬಲದಲ್ಲಿದ್ದರು. ಬದಲು ಯಥಾರೀತಿಯಂತೆ ಜರ್ಮನ್ ದಳದ ಪ್ರತಿಭಟನೆಯನ್ನು ಎದುರಿಸುವ ಪ್ರಸಂಗಬಂದಿದೆಯೋ ವಿನಹ ವಿಜಯದ ಚಿಹ್ನೆ ದೂರದಲ್ಲೇ ಉಳಿದಿದೆ.

ಈ ವರೆಗೆ ಹಿಂಜರಿಯು

ರಂಭಿಸಿದರು ಎಂಬುದರ ಬಗ್ಗೆ ಆಲೋಚನೆಮಾಡಿದರೆ ಪ್ರತಿಯೊಬ್ಬನಿಗೂ ಒಂದೆರಡು ವಿಚಾರಗಳು ಹೊಳೆಯದಿರವು. ನಾನು ಕಳೆದ ವಾರ ಬರೆದಂತೆ ಮಿತ್ರರು ರೈನ್‌ಕಾಳಗ ಪ್ರಾರಂಭಿಸಿದ್ದಾರೆ. ಇದು ಬಹು ಮಹತ್ವದ ಕಾಳಗ. ಇದರ ಫಲಿತಾಂಶದಲ್ಲಿಯೇ ಯೂರೋಪಿನ ಭವಿತವ್ಯವಿದೆಯೆಂದೂ ಕಳೆದ ವಾರ ಬರೆದಿದ್ದೆನು. ಈ ಮಹಾ ಯುದ್ಧರಂಗದಿಂದ ಮಿತ್ರರ ದೃಷ್ಟಿಯನ್ನು ಬೇರೆಡೆಗೆ ಸೆಳೆದು ಮಿತ್ರಶಿಬಿರದಲ್ಲಿ ಅವ್ಯವಸ್ಥೆಯುಂಟುಮಾಡಲು ಈ ಧಾಳಿ ಕೈಕೊಂಡಿರಬಹುದು. ಎರಡನೆಯದಾಗಿ ಜರ್ಮನರು ನಾನಾರೀತಿಯ ಗುಪ್ತಾಸ್ತ್ರಗಳನ್ನು ಕಂಡುಹಿಡಿದಿದ್ದರೂ ಸಾಕಷ್ಟು ಪ್ರಮಾಣದಲ್ಲಿ ತಯಾರಿಸಿ ಪ್ರಯೋಗಿಸಲು ಆಗಿರುವದಿಲ್ಲವೆಂದು ಈ ಮೊದಲು ನಾನು ಬರೆದಿದ್ದೆನು. ಈ ಗುಪ್ತಾಸ್ತ್ರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಲು ಸಮಯಬೇಕಿರುವದರಿಂದ ಆ ಸಮಯವನ್ನು ಒದಗಿಸಿಕೊಳ್ಳಲು ಈ ಪ್ರತಿಧಾಳಿ ಹೂಡಿರಬಹುದು. ಮೂರನೆಯದಾಗಿ ಹೇಳಬೇಕಾದರೆ ಮಿತ್ರಶಿಬಿರದಲ್ಲಿ ಪರಸ್ಪರರೊಳಗೆ ಬಂದಿರುವ ವೈಮನಸ್ಸನ್ನು ಹೆಚ್ಚಿಸಿ ಇನ್ನಷ್ಟು ಅವ್ಯವಸ್ಥೆಯನ್ನು ತಂದು ತಮ್ಮತಮ್ಮೊಳಗೆ ಉಗ್ರ ಕಚ್ಚಾಟಕ್ಕೆ ಪ್ರಾರಂಭಿಸುವಂತೆ ಪ್ರೋತ್ಸಾಹಿಸುವದೂ ಈ ಧಾಳಿಯ ಧ್ಯೇಯವಿರಬಹುದು. ಹೇಗೂ ಜರ್ಮನರ ಈ ಧಾಳಿಯ ವಾರ್ತೆಯಿಂದ ಮಿತ್ರಸೈನಿಕರ ಮುಖ ಬಿಳುಪೇರಿರಬಹುದು. 'ವೈಟ್‌ಹಾಲ್' ನಡುಗಿರಬಹುದು. ಚರ್ಚಿಲ್ ರೂಸ್‌ವೆಲ್ಟರ ಹೃದಯ ತಳಮಳಗೊಂಡಿರಬಹುದು. ಆದರೆ ಈ ಹೃದಯ ವಿಕಾರಗಳಿಗೆ ತುತ್ತಾಗಿ ನಿರಾಶೆಗೊಳ್ಳುವ ಜನ ಇವರಲ್ಲ. ಜರ್ಮನರ ಮುನ್ನಡೆಯನ್ನು ತಡೆದು ಹಿಂದೆ ದೂಡಲು ತಕ್ಕ ಪ್ರಯತ್ನಗಳಾಗುತ್ತಿವೆ. ಇಂಗ್ಲೆಂಡಿನಲ್ಲಿ ಹೊಸದಾಗಿ ಕಾಲುಮಿಲಿಯ ಸೈನಿಕರನ್ನು ಸೇರಿಸುವ ಹೊಸ ಕಾಯಿದೆ ಸಾರಲ್ಪಟ್ಟಿದೆ. ಹೊಸದಾಗಿ 20 ಡಿವಿಜನುಗಳನ್ನು ತಯಾರಿಸುವ ಕೆಲಸ ಪ್ರಾರಂಭವಾಗಿದೆ.

ಯೂರೋಪಿನ ರಂಗದಲ್ಲಿ ರಾಷ್ಟ್ರರಾಷ್ಟ್ರಗಳೊಳಗೆ ಅವಿಶ್ವಾಸ, ಅಪನಂಬಿಕೆ ಹುಟ್ಟಿವೆಯೆಂದು ಈ ಮೊದಲು ಬರೆಯಲಾಗಿತ್ತು. ಗ್ರೀಸಿನಲ್ಲಿಯ ಬ್ರಿಟಿಷ್ ನೀತಿಯು ಮಿತ್ರಶಿಬಿರದಲ್ಲಿ ಕೋಲಾಹಲವನ್ನೇ ಎಬ್ಬಿಸಿದೆ. ಬ್ರಿಟಿಷ್ ಅಧಿಕಾರಷಾಹಿಯನ್ನು ಅನೇಕರು ಕಟುವಾಗಿ ಖಂಡಿಸಿದ್ದಾರೆ. ಪೋಲೆಂಡಿನ ಸಮಸ್ಯೆಯಲ್ಲಿ ತಾವು ಹೇಳುವಂತೆ ಬ್ರಿಟನ್, ಅಮೇರಿಕಾಗಳು ವರ್ತಿಸದಿದ್ದರೆ ತಾವು ಸಹಕರಿಸಲು ಒಪ್ಪುವದಿಲ್ಲವೆಂದು ಸ್ಟಾಲಿನರು ತಿಳಿಸಿದ್ದಾರಂತೆ. ಗ್ರೀಸ್, ಇಟಲಿಗಳಲ್ಲಿನ ಬ್ರಿಟಿಷ್ ನೀತಿಯು ಅಮೇರಿಕನರಿಗೆ ಜಿಗುಪ್ಸೆ ಹುಟ್ಟಿಸಿದೆ. ಈ ರೀತಿ ಪರಸ್ಪರರಲ್ಲಿ ಅಭಿಪ್ರಾಯಭೇದಗಳಾಗಿವೆ. ಯುದ್ಧದ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಪರಿಸ್ಥಿತಿ ಹೀಗಾಗುತ್ತಿರುವದು ಶೋಚನೀಯವೇ; ಗ್ರೀಸಿನಲ್ಲಿ ಉಪಸ್ಥಿತವಾಗಿರುವ ದಾರುಣಪರಿಸ್ಥಿತಿಯ ಬಗ್ಗೆ ಮಾತಾಡಿ ಅಲ್ಲಿಯ ಸ್ಥಿತಿಯನ್ನು ಸುಧಾರಿಸಲು ಬ್ರಿಟಿಷ್ ಪ್ರಧಾನರಾದ ಚರ್ಚಿಲ್ಲರೂ, ವಿದೇಶಮಂತ್ರಿ ಈಡನರೂ ಅಲ್ಲಿಗೆ ಹೋಗಿದ್ದರು. ಗ್ರೀಸ್‌ನಲ್ಲಿ ರಾಜಕೀಯ ಸಮ್ಮೇಳನ ಒಂದನ್ನು ಸೇರಿಸಿ ಅದರಲ್ಲಿ ಗ್ರೀಸಿನ ಭವಿತವ್ಯದ ಇತ್ಯರ್ಥಮಾಡಲಾಗುವದೆಂದು ತಿಳಿದುಬಂತು. ಈ ಮಾತುಕತೆಯೂ ಫಲಕಾರಿ

ಹಿಂದಕ್ಕೆ ಹೋಗಿರುವರೆಂದೂ ವರ್ತಮಾನ ಇತ್ತಲಾಗಿ ಬಂದಿದೆ.

ಪೂರ್ವಭಾಗದಲ್ಲಿ ರಷ್ಯನ್ ಧಾಳಿಯು ಅಷ್ಟು ಪ್ರಗತಿಯುತವಾಗಿಲ್ಲ. ಶಾಂತಸಾಗರದಲ್ಲಿ ಜಪಾನರಿಗೆ ದೊಡ್ಡ ಅಪಜಯವಾಯಿತೆಂದು ಈಗಿನ ವಾರ್ತೆಯೊಂದು ತಿಳಿಸುತ್ತದೆ. ಅಮೇರಿಕನರು ಲೆಟೆ ದ್ವೀಪವನ್ನು ಪೂರ್ತಿ ವಶಪಡಿಸಿಕೊಂಡು ಜಪಾನರನ್ನು ಹಿಮ್ಮೆಟ್ಟಿಸಿರುವರಂತೆ. ಜಪಾನ್ ಸೇನೆಗಳ ಚರಿತ್ರೆಯಲ್ಲಿ ಇದು ಪ್ರಾಮುಖ್ಯವಾದ ಅಪಜಯವೆಂದು ಮಿತ್ರರು ಹೇಳಿದ್ದಾರೆ. ಜಪಾನರ ಚಲನವಲನಗಳ ವಿಚಾರ ಯಾವ ಸಂಗತಿಯೂ ತಿಳಿದುಬಂದಿರುವದಿಲ್ಲ. ಚೈನಾದಲ್ಲಿ ಈ ವಾರ ಚೈನೀಯರಿಗೆ ಅಲ್ಪ ಸ್ವಲ್ಪ ಜಯಗಳು ದೊರೆತಿವೆ. ಆದರೂ ಚೀನಾವು ಗಂಡಾಂತರದಿಂದ ಪಾರಾಗಿಲ್ಲ. ಬರ್ಮಾರಂಗದಲ್ಲಿದ್ದ ಮಿತ್ರರ 14 ನೇ ದಳವು ಮುಂದೆ ಸಾಗಿ ಬರ್ಮಾದೊಳಗೆ ಸುಮಾರು 200 ಮೈಲುಗಳಷ್ಟು ಸಾಗಿದೆ. ಇಂಡಾಕ್ಷೇತ್ರದ ವರೆಗೆ ಹೋಗಿ ಬ್ರಿಟಿಷರ 36 ನೇ ನೇ ಸೇನೆಯನ್ನು ಸೇರಿಕೊಂಡಿದೆ. ಈ 14 ನೇ ದಳವು ಬರ್ಮಾದಲ್ಲಿ ಸುಮಾರು 500 ಚದರ ಮೈಲು ಅಂದರೆ ಕೊಡಗಿನ $\frac{1}{3}$ ಅಂಶದಷ್ಟು ಭಾಗವನ್ನು ವಶಪಡಿಸಿಕೊಂಡಿದೆ. ಈ ಭಾಗದಲ್ಲಿ ಸುಮಾರು 800 ಹಳ್ಳಿಗಳಿವೆಯೆಂದು ತಿಳಿದುಬಂದಿದೆ.

—ವೀರರಾಜಪೇಟೆಗೆ 'ಕೊಡಗು' ಏಜೆಂಟರು—
—ಶ್ರೀ ಕೆ. ಎಂ. ಸುಬ್ರಾಯನವರು—

—ಶೀಲಡಾ—
ಎಂಟಿ ಮಲೇರಿಯಾ ವನಸ್ಪತಿ ಪಿಲ್ಸ್
ಎಲ್ಲ ತೆರದ ಜ್ವರ, ಜ್ವರಗಡ್ಡೆ, ತಜ್ಜನ್ಯ ಅಶಕ್ತತೆ ಮೇಲೆ ರಾಮಬಾಣ; ಲಿವರ, ಹೊಟ್ಟೆನೋವು, ಮಲಬದ್ಧತೆ, ಸುಧಾರಿಸಿ ಶಕ್ತಿ ಬೆಳೆಸುತ್ತದೆ. ಕ್ವಿನೈನ್ ಬದಲು ವೈದ್ಯ ಡಾಕ್ಟರರು ದವಾಖಾನೆಗಳಲ್ಲಿ ಉಪಯೋಗಿಸುವರು
1000 ಗುಳಿಗೆಗಳಿಗೆ ರೂ. 15-0-0
100ಕ್ಕೆ ರೂ. 1-12-0. ಈ ಔಷ
ಗಳಲ್ಲಿ ಗುಣವಿಲ್ಲವೆಂದು ಸಿದ್ಧ ಮಾಡಿ ಕೊಟ್ಟವರಿಗೆ ಒಂದು ಸಾವಿರ ರೂ. ಬಹುಮಾನ ಕೊಡಲಾಗುವುದು. ಪ್ರತಿ ಊ
ನಲ್ಲಿ ಮಾರಾಟಕ್ಕೆ ಏಜೆಂಜರು ಬೇಕ
ಶೀಲಡಾ ಕೆಮಿಕಲ್ ಕಂಪೆನಿ,
ಶಿರಸಿ, ಉತ್ತರ ಕನ್ನಡ
ಸೋಲ್ ಏಜೆಂಟರು:—
ಎಸ್. ಎಲ್. (ಅಪ್ಪುರಾವ್) ಧಾಕಪ್ಪ
ಬಡವರ ಔಷಧಿ ಸರ್ವಿಸ್,
ಶಿರ್ಸಿ, ಉತ್ತರ ಕನ್ನ

ಪ್ರೆಸಿಡೆಂಟ್ ರುಜ್‌ವೆಲ್ಟ್, ಮಿ. ಚರ್ಚಿಲ್ ಮತ್ತು ಎಂ. ಸ್ಟಾಲಿನರು ರುವ ಫೆಬ್ರವರಿಗೆ ಮೊದಲು ಒಟ್ಟು ಸೇರುವುದು ಅಸಂಭವವೆಂದು ಹೇಳಲಾಗಿದೆ.

ನಂಬಿಕೆಗರ್ಹವಾದ ಸಂಖ್ಯೆಗಳು.
23ನೇ ತ್ರೈವಾರ್ಷಿಕ ಮೌಲ್ಯಗಣನೆ.
ಮೂರು ವರ್ಷಗಳ ಐನ್ ಲಾಭ 1,50,88,092.
ವಿಮಾದಾರರ ಕ್ಷೇಮನಿಧಿ 54 ಲಕ್ಷ ಸೇರಿಸಿದೆ.
ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ $12\frac{1}{2}$%
ಎಂಡೋಮೆಂಟ್ .... 1000ಕ್ಕೆ ವರ್ಷಕ್ಕೆ $10\frac{1}{2}$%
'ಓರಿಯಂಟಲ್'
ಗವರ್ನ್‌ಮೆಂಟ್ ಸೆಕ್ಯುರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ
ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಖಚೇರಿ—ಬೊಂಬಾಯಿ.
ಶಾಖೆ—'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.
ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವ ರೋಡು, ಮಂಗಳೂರು.

ಶ್ರೀ ಶಾರದಾ ಕಾಫಿಪುಡಿ
ಯಾವುದೊಂದು ಮಿಶ್ರಣವಿಲ್ಲದೆ ಪ್ರತಿ ದಿನವೂ ಹುರಿದು ಪುಡಿ ಮಾಡಿದ್ದನ್ನೇ ಕೊಳ್ಳಿರಿ.
ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮಪ್ರಕಾರವಾಗಿ ಹುರಿದು ಪುಡಿಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.
ಶ್ರೀ ಶಾರದಾ ಕಾಫಿ ವರ್ಕ್ಸ್
ಮೆಕ್‌ಡೊವೆಲ್ ಬಿಲ್ಡಿಂಗ್ಸ್
ಮಡಿಕೇರಿ
12)

ಅನುಭವಸ್ಥ ಕೆಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು
ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.
ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.
8) ಕೊಡಗಿನ ಪ್ರವರ್ತಕರು:—
ವೀರರಾಜೇಂದ್ರಪೇಟೆಗೆ— ಶ್ರೀ ಯು. ಕೆ. ಮುದ್ದಪ್ಪನವರು
ಮಡಿಕೇರಿಗೆ— ಶ್ರೀ ದುರ್ಗಾ ಸ್ಟೋರ್
ಮೋಹನ್ ಬೀಡಿ ವರ್ಕ್ಸ್, 273, ರೈಲ್ವೆ ಸ್ಟೇಷನ್ ರಸ್ತೆ, ಮಂಗಳೂ

THE CANARA BANKING CORPORATION LIMITED
(Incorporated in British India Liablity of Members is Limited)
ETD—1906
Head Office: UDIPI, South Kanara.

Authorised Capital	Rs. 25,00,000
Issued & Subcribed Capital	.... Rs. 16,00,000
Paid up capital	.... Rs. 14,55,165
Reserves	.... Rs. 4,15,000

TOTAL WORKING CAPITAL-1 CRORE & 24 LAKHS

ANNOUNCEMENT

Branchs of the Bank have been opened at
10) HUBLI & DHARWAR on 4-12-1944.

ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
— ಬೇಕಾಗಿದ್ದಾರೆ —
ಜನಬಳಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತ್ತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸ್ಸುಗಳನ್ನು ಸೂಚಿಸಿ ಬರೆಯಿರಿ:
ಕೊಚ್ಚಿಕಾರ್ ಬ್ರದರ್ಸ್, ಲಿ.
ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
14) ಪಿ. ಬಿ. ನಂ. 337, ಮದ್ರಾಸು.

ಧಾತುವೃದ್ಧಿ ರಸಾಯನ (ZANDU)
"ರ್‍ಯಾಕ್ಟೋ—ಫಾಸ್ಫೋ—ಮಾಲ್ಟ್"
ಎಷ್ಟೋ ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ:
ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.
ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂ ಇರುವುದು. ಇದರಲ್ಲಿ ನವಜೀವನಕ್ಕೆ ಕಾರಣವಾದ ಎಲ್ಲಾ ವಿಟಮಿನ್ನುಗಳು, ಶಕ್ತಿ, ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.
ಇದರಲ್ಲಿ ಇಲೆಕ್ಟ್ರಾ ಪಾಸ್ಫೋಮಾಲ್ಟ್, ಹಿಮೋಗ್ಲೋಬಿನ್, ಸೋಡಿಗ್ಲಿಸರೋ ಫಾಸ್ಫೇಟ್ ಪೆಪ್ಸಿನ್, ಸ್ಕಾಲ್, ಮಾಲ್ಟ್ ಎಕ್ಸ್‌ಟ್ರ್ಯಾಕ್ಟ್, ದ್ರಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂತ ಇದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿದೆ.
ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್,
15) ಗೋಖಲೆ ರೋಡ್, ಬೊಂಬಾಯಿ.

ಎಂಪೈರ್ ಆಫ್ ಇಂಡಿಯಾ
ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
52) ಸ್ಥಾಪನೆ: ೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು. }
ಒಟ್ಟು ಆದಾಯ ... ೯೭,೩೭,೦೦೦ ಮೀರಿದ
ಚಾಲ್ತಿಯಿರುವ ವಿಮೆ ೧೯,೪೯,೮೮,೦೦೦ ,,
ಆಸ್ತಿ ... ೯,೩೦,೪೭,೦೦೦ ,,
ಕಂಪನಿಯು ಆವರೆಗೆ ಕೊಟ್ಟ ಕ್ಲೈಮುಗಳು ೮,೩೪,೯೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ:	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

"ಟ್ರಾಪಿಕಲ್"
ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್ ಖಾನ್,
ಡಾ. ಯಂ. ಎ. ಅನ್ಸಾರಿ, ಸುಭಾಶಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.
ಜೀವನದ ಸಂಧ್ಯಾಕಾಲದಲ್ಲಿ ಜೀವವಿಮೆಯೊಂದೇ ನಿಮ್ಮನ್ನು ರಕ್ಷಿಸುವುದು. ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ ಟ್ರಾಪಿಕಲಿನಲ್ಲಿ ವಿಮೆ ಮಾಡಿರಿ.
ಮುಖ್ಯ ಕಛೇರಿ: ಹೊಸ ಡಿಲ್ಲಿ. [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:
ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,
48) ಮಡಿಕೇರಿ. OR ಬ್ರಾಂಚ್ ಮ್ಯಾನೇಜರ್, ಮಂಗಳೂರು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.
ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.
ವಸೂಲಾದ ಶೇರ್ ಮೊಬಲಗು ರೂ. 95,000, ಜಮಾ ಖರ್ಚು ಶೇವನಾತಿ 2,24,755 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.
ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟಿನ ಆಧಾರದ ಮೇಲೆ 90% ಸಾಲ ಕೊಡಲಾಗುತ್ತೆ. ನಿರಖು ಡಿಪಾಜಿಟ್ಟುಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at
'Kodagu' Press, Mercara, for 'Kodagu' Ltd.

ಅಸ್ಪೃಶ್ಯ ಕವಿ.

ಲೇ:- ಶ್ರೀ. ಪಿ. [illegible]
(ಉಪಾಧ್ಯಾಯರ ತರಬೇತು ಶಾಲೆ, ಮಡಿಕೇರಿ.)

(ಭೋಗಷಟ್ಪದಿ.)

ಕೊಡಗಿನ ಮಾತೆಂಬ
ಕಡಿಯತು ನಾಡೊಳು
ಹಡೆದಳು ವೀರನ ಸಡಗರದಿ ||
ಮೃಡನಾ ಸೇವಕ
ಗಡಸುಕುಮಾರನ
ಪಡೆದಳು ಅಸ್ಪೃಶ್ಯಕವಿಗಳನು ||೧||

ಇಂದು ಹಾಸನಾ
ಅಂದದಿ ಸುತ ಚಿ-
ಕ್ಕಂದಿಂ ತಬ್ಬಲಿಯಾಗಿದ್ದಾ ||
ಬಂಧುಗಳಾಶ್ರಯ-
ದಿಂದಲಿ ಮುಂದಕೆ
ಹೊಂದಿದ ತುಸುವಿದ್ಯಾರ್ಜನೆಯ ||೨||

ಎಳೆಯರೊಳಾಡುತ
ಕಳೆದರು ಬಾಲ್ಯವ
ಸುಲಲಿತ ಕವಿತೆಯ ಹಾಡುತಲಿ ||
ಅಳುಕದೆ ಬಳುಕದೆ
ತುಳುಕುವ ತನ್ನಾ ವಿ-
ದುಳಿನ ಶಕ್ತಿಯ ಹರಹುತಲಿ ||೩||

ವರಸುತ ವ್ಯಾಸಗೆ
ದೊರಕದ ಗುರವೊಲು
"ಹರದಾಸ"ರಿಗೂ ಸಿಲುಕಿದರು ||
ಗುರು "ವೆಂಕಟ"ರಿಂ
ದರಿದರು ಕವಿತೆಯ
ಪರಮ ರಹಸ್ಯದ ಶಿಕ್ಷಣವ ||೪||

ಕೊಡಗಿನ ಹಿರಿಯರು
ಕಡುಗಲಿಗಳ್ ಸಂ!
ಅಡಿಯಿಡಲಿಲ್ಲ ಸಾಹಿತ್ಯದಲಿ ||
ಬಡವಾಗಿಹ ಈ
ನುಡಿಯನು ಅಡಗಿಸೆ
ಪಡೆದರು ವರಕವಿಸ್ಥಾನವನು ||೫||

ಕವನವ ಕಾವ್ಯವ
ವಿವರಿಸಿ ನಾಟ್ಯವ
ನವರಸದಿಂದಲಂಕೃತವಾಗಿ ||
ಅವರಾ ಕೃತಿಗಳು
ಅವರ ಸುಶೈಲಿಯು
ಭುವಿಯಲ್ಲಿ ಕವಿಗಳ ಮೆಚ್ಚಿಸಿತು ||೬||

ಪಾವನ ಮೂರ್ತಿಯು
ಕಾವೇರಿಯ ಕಥೆ
ಸಾವಿತ್ರಿಯ ಮೂರ್ತಿಯ ಚರಿತೆಗಳು ||
ಕೋವಿದ್ದ ಹರಸುತ
ದೇವಿಸುಕನ್ಯೆಯು
ಪಾವನ ಚರಿತೆಯ ಹರಡಿದರು ||೭||

ನಡೆದರು ಎಲ್ಲೆಡೆ
ಬಿಡದೆ ಚರಿಸಿ-ತಾ
ನೊಡನೆ ನಾಟ್ಯಗಳ ರಚಿಸುತಲಿ ||
ಉಡುರಾಜನು ತಾ
ನೊಡನೆ ಬೆಳೆವ ವೊಲು
ಪಡೆದರು ಎಲ್ಲೆಡೆ ಕೀರ್ತಿಯನು ||೮||

ಹರದಾಸಪ್ಪಚ
ನರಕವಿಗಳು ಶ್ರೀ
ಹರಹರೆನುತಲೇ ಹರಣವನು ||
ಪರಮ ದಯಾನಿಧಿ
ಹರನಿಂಗೊಪ್ಪಿಸಿ
ಪರಧಾಮವ ತಾವೈದಿದರು ||೯||

ಅಳಿಯಿತು ಕಾಯವು
ಉಳಿಯಿತು ಕೀರ್ತಿಯು
ತಳಮಳಗೊಂಡರು ದೇಶಿಗರು ||
ಅಳಿದ ಕವಿಗಳ
ಸುಲಲಿತ ಆತ್ಮಕೆ
ಜಲಜನಾಭ ನೀಡ್ಯಾಂತಿಯನು ||೧೦||

ಪತ್ರ

ಸಂಪಾದಕರಲ್ಲಿ,

ಕೊಡಗು ಚೀಫ್ ಕಮಿಷನರ್ ಸಾಹೇಬರು ಕಳೆದ ನ್ಯಾಯವಿಧಾಯಕ ಸಭೆಯ ಅಧ್ಯಕ್ಷಸ್ಥಾನದಿಂದ ಭಾಷಣ ಕೊಡುತ್ತಾ, ಕೊಡಗಿನ ಎಕ್ಸೈಸ್ ಉತ್ಪತ್ತಿಯು ವರ್ಷ ವರ್ಷ ಹೆಚ್ಚಾಗುತ್ತಿದೆಯೆಂದು [illegible] ಯಾಗಿದೆಯೆಂದೂ ಹೇಳಿದರು. ತಾ. 24-12-44 ರಲ್ಲಿ ನಡೆದ 12 ನೇ ಸಹಕಾರಿ ಸಮ್ಮೇಳನದ [illegible] ಸ್ವಾಗತಾಧ್ಯಕ್ಷರು [illegible] ಭಾಷಣದಲ್ಲಿ ಯುದ್ಧಕ್ಕೆ ಮೊದಲು ವರ್ಷಕ್ಕೆ 16 ರಿಂದ 18 ಸಾವಿರ ಗೆಲನುಗಳಷ್ಟು ಸಾರಾಯಿ ಖರ್ಚಾಗುತ್ತಿತ್ತು. ಆದರೆ 1942-43 ನೇ ವರ್ಷಕ್ಕೆ 45000 ಗೆಲನ್ ಖರ್ಚಾಗಿದೆ. ಇದು ಇನ್ನೂ ಹೆಚ್ಚುತ್ತಾ ಇದೆ. ಇದನ್ನು ನಿಲ್ಲಿಸಲು ಸಹಕಾರಿಗಳು ಪ್ರಯತ್ನಿಸಿದರೆ ಸಹಕಾರ ಕಾರ್ಯಕ್ಷೇತ್ರದಲ್ಲಿ ಕಳಶಪ್ರಾಯವಾದ ಕಾರ್ಯವಾಗುವದು ಎಂದರು. ಕೊಡಗು ನಾಡಿನವರು ಇನ್ನಾದರೂ ಎಚ್ಚರಿಕೆಯಿಂದಿರಬೇಕು. ನೋಡುವವರಿಗೆ ಜಿಗುಪ್ಸೆ ಹುಟ್ಟಿಸುವ, ಕೇಳುವವರಿಗೆ ಅಸಹ್ಯವೆನಿಸುವ ಈ ದುಶ್ಚಟವನ್ನು ಬಿಡಬೇಕು. ಕೊಡಗು ಕಾಂಗ್ರೆಸ್ ಸೇವಾಸಂಘದವರು ಪಾನನಿರೋಧದ ಬಗ್ಗೆ ಪ್ರಚಾರ ಕೈಕೊಳ್ಳುವ ತೀರ್ಮಾನವನ್ನು ಮಾಡಿರುವರು. ದೇಶದ ಜನರ ಬೆಂಬಲ ಇದಕ್ಕೆ ಬೇಕು. ಪ್ರಾಂತ್ಯದ ಅಧಿಕಾರಿಗಳು ಇದಕ್ಕೆ ಬೆಂಬಲವಿತ್ತು ಕೊಡಗು ನಾಡಿಗೆ ಕಳಂಕಪ್ರಾಯವಾಗಿರುವ ಈ ಕುಡುಕತನವನ್ನು ಕಡೆಗಟ್ಟಿ ಕ್ರಮಶಃ ಪಾನನಿರೋಧ ಕಾಯಿದೆಯನ್ನು ಜಾರಿಗೆ ತರಲು ಸಹಾಯಕರಾಗುವರೆಂದು [illegible]

ಎಂ. ಬಿ. [illegible]

ದನಕರುಗಳ ರೋಗ ನಿವಾರಣೆ.

ಈ ಪ್ರಪಂಚದಲ್ಲಿ ಮನುಷ್ಯರಿಗೆ ಅತ್ಯವಶ್ಯಕವಾದ ಪ್ರತಿ ದನಕರುಗಳಿಗೆ [illegible] ಮುಖ್ಯವಾಗಿ ರೈತರ ಜೀವನವೇ ದನಕರುಗಳು. ಈಗ ಎಲ್ಲೆಲ್ಲೂ ಕಾಣಿಸಿಕೊಂಡಿರುವ ದನಕರುಗಳ ಕಾಯಿಲೆಗಳಿಂದ ರೈತರು ಜನರು ಅನೇಕ ತರ ದನಕರುಗಳನ್ನು ಕಳೆದುಕೊಂಡಿರುತ್ತಾರೆ. ಆದರೆ ಇನ್ನು ಮುಂದಕ್ಕೆ ಇಂಥಾ ಕಾಯಿಲೆಗಳಿಗೆ ರಾಮಬಾಣದಂತಿರುವ ಔಷಧಿಯನ್ನು ತೆಗೆದುಕೊಂಡರೆ ಭಯಪಡಬೇಕಾದ್ದಿಲ್ಲ. ಅನೇಕ ಕಡೆಗಳಲ್ಲಿ ಇಂಥಾ ಕಾಯಿಲೆಗಳನ್ನು ವಾಸಿ ಮಾಡಿದ ಮಹನೀಯರು [illegible] ಅವರಲ್ಲಿ ಅನೇಕ ಶಿಫಾರಸು ಪತ್ರಗಳನ್ನು ಪಡೆದಿರುತ್ತೇವೆ. ಕೆಲವೇ ದಿನಗಳಲ್ಲಿ ರೈತರ ರೋಗಗಳನ್ನು ನಿವಾರಿಸಿ ಕೊಡುವೆವು. ಹೆಚ್ಚಿನ ಸಂಗತಿಗೆ ಕೆಳಗಿನ ವಿಳಾಸಕ್ಕೆ ಪತ್ರ ಮುಖೇನವಾಗಲೀ, ಮುಖತಾ ಕಂಡಾಗಲೀ ಮಾತನಾಡಿ ತಿಳಿದುಕೊಳ್ಳಬಹುದು.

ಕೆ. ಕೃಷ್ಣಸ್ವಾಮಿ,
C/o. ಸಿ. ಕೆ. ಸ್ವಾಮಿ ಅಂಡ್ ಕಂಪೆನಿ,
4-2 ತಲ್ಲಚೇರಿ.

(1ನೇ ಪುಟದಿಂದ ಸಾಗಿದುದು.)

ರಿಂದ ಪುರಾತನಿಗಳ ಶ್ರದ್ಧೆಯನ್ನೂ, ಭಕ್ತಿಯನ್ನೂ, ನೂತನರಿಗಳ ಮತಿಯನ್ನೂ ಯುಕ್ತಿಯನ್ನೂ ಒಟ್ಟುಗೂಡಿಸಿ ಕಾಂಗ್ರೆಸಿನ ಕಾರ್ಯಸಾಧನೆಯಲ್ಲಿ ತೊಡಗಿದ್ದಲ್ಲಿ ಅನುಭೂತಿಯ ಸುವರ್ಣ ಕೀರ್ತಿಯನ್ನೂ ಕಾರ್ಯಸಫಲತೆಯನ್ನೂ ಪವಿತ್ರ ಜ್ಯೋತಿಯನ್ನೂ ಬೆಳಗಿಸುತ್ತಾ ನವೀನ ದೃಷ್ಟಿಯ ಕಾಂಗ್ರೆಸು ರೂಪುಗೊಳ್ಳಲಿ.

ವಂದೇಮಾತರಂ.